

**ಶಾಲಾ ಶಿಕ್ಷಣ**

ಒಟ್ಟು ಶಾಲೆಗಳು **15** ಲಕ್ಷ

ಒಟ್ಟು ಶಿಕ್ಷಕರು **1.20** ಕೋಟಿ

ಒಟ್ಟು ವಿದ್ಯಾರ್ಥಿಗಳು **26.5** ಕೋಟಿ

### ಕರಡು ರಚನೆಯ ಹಿಂದೆಮುಂದೆ

ಕರಡನ್ನು ತಯಾರು ಮಾಡಲು ನಿಯೋಜನೆಗೊಂಡಿದ್ದ 'ರಾಷ್ಟ್ರೀಯ ಸಂಚಾಲನಾ ಸಮಿತಿ'ಯು ಶಿಕ್ಷಣ ಸಚಿವಾಲಯ ಮತ್ತು 'ಎನ್‌ಸಿಇಆರ್‌ಟಿ' ಸಹಯೋಗದಲ್ಲಿ ಹೊಸ ಶಿಕ್ಷಣ ನೀತಿಯ ಕರಡನ್ನು ಸಿದ್ಧಗೊಳಿಸಿದೆ. ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ನಾಲ್ಕು ಸಾವಿರ ತಜ್ಞರು ಸಂಪನ್ಮೂಲ ವ್ಯಕ್ತಿಗಳಾಗಿ ದುಡಿದಿದ್ದಾರೆ. ಇರುವ ಶಿಕ್ಷಣ ವ್ಯವಸ್ಥೆ ಮತ್ತು ಬೇಕಾದ ಬದಲಾವಣೆಯ ಕುರಿತು 25 ಸ್ಥಾನ ಪತ್ರಿಕೆಗಳು (Position Paper) ಸಲ್ಲಿಕೆಯಾಗಿವೆ. ಇವುಗಳ ಪರಾಮರ್ಶೆಗೆ 25 ರಾಷ್ಟ್ರೀಯ ಮಟ್ಟದ ಉಪಸಮಿತಿಗಳು ವರದಿ ನೀಡಿವೆ. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರಗಳಿಂದ 1550 ಸಮಾಲೋಚನಾ ವರದಿಗಳನ್ನು ಪಡೆಯಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಶಿಕ್ಷಕರು, ಶಿಕ್ಷಣ ತಜ್ಞರು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಕೇಂದ್ರ ಸಚಿವಾಲಯ ರಾಜ್ಯಗಳ ಶಿಕ್ಷಣ ಸಚಿವಾಲಯಗಳೊಂದಿಗೆ ಹಲವು ಸಭೆ ನಡೆಸಿದೆ. ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಸರ್ಕಾರೇತರ ಸಂಸ್ಥೆಗಳು ಅಭಿಪ್ರಾಯ ಮಂಡಿಸಿವೆ. ವಿಶ್ವವಿದ್ಯಾಲಯಗಳು ಸೆಮಿನಾರುಗಳನ್ನು ಸಂಘಟಿಸಿ ಚರ್ಚಿಸಿವೆ. ಒಂದು ನೂರು ಪ್ರಶ್ನೆಗಳ ಡಿಜಿಟಲ್ ಸರ್ವೆ ನಡೆದಿದೆ. ಹತ್ತು ಲಕ್ಷ ಜನ ಪೋಷಕರು, ಆಸಕ್ತ ನಾಗರಿಕರು, ವಿದ್ಯಾರ್ಥಿಗಳು ಭಾಗವಹಿಸಿ ಮಾಹಿತಿ ಅಭಿಪ್ರಾಯ ಉತ್ತರ ನೀಡಿದ್ದಾರೆ. ಇಷ್ಟೆಲ್ಲ ಜನರ ಚಟುವಟಿಕೆಯ ಫಲವಾಗಿ ಈ ಕರಡು ಸಿದ್ಧಗೊಂಡಿದೆ.

### ಕರಡಿನಲ್ಲಿ ಏನೇನಿದೆ?

ನೆಲದ ಸಂಸ್ಕೃತಿ, ಸತ್ವ, ಹಿರಿಮೆ ಗರಿಮೆಗಳನ್ನೊಳಗೊಂಡು ಭಾರತೀಯತೆಯನ್ನು ಪ್ರತಿಧ್ವನಿಸುವ ಉನ್ನತ ಗುಣಮಟ್ಟದ ಹಾಗೂ ಪ್ರತಿಕ್ರಿಯಾತ್ಮಕ ಶಿಕ್ಷಣವನ್ನು ಸಮಾನ ಅವಕಾಶಗಳ ಮೂಲಕ ಸರ್ವರಿಗೂ ನೀಡುವುದು, ಆ ಮೂಲಕ ದೇಶವನ್ನು ಜ್ಞಾನದ ಮಹಾನ್ ಶಕ್ತಿಯನ್ನಾಗಿಸುವುದು 'ರಾಷ್ಟ್ರೀಯ ಶಿಕ್ಷಣ ನೀತಿ'ಯ ಗುರಿಯಾಗಿದೆ.

ಸರ್ಕಾರ ಬಿಡುಗಡೆ ಮಾಡಿರುವ 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು' (ಪೂರ್ವಭಾವಿ) 2020ರ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ರೂಪುಗೊಂಡಿದ್ದು, ಸದರಿ ನೀತಿಯ ಅನುಷ್ಠಾನಕ್ಕೆ ಬೇಕಾದ ಕಾರ್ಯಸೂಚಿಯನ್ನು ಒದಗಿಸುವ ಪ್ರಯತ್ನ ಮಾಡಿದೆ. 624 ಪುಟಗಳ ಸುದೀರ್ಘ ಕರಡಿನಲ್ಲಿ ಎ.ಬಿ.ಸಿ.ಡಿ. ಮತ್ತು ಇ ಎಂಬ ಐದು ಪ್ರಮುಖ ಭಾಗಗಳಿದ್ದು, ಪ್ರತಿಯೊಂದರಲ್ಲೂ ವಿವಿಧ ಮಹತ್ವದ ಅಧ್ಯಾಯಗಳಿವೆ.

ಶಿಕ್ಷಣದ ಗುರಿ, ಕಲಿಯಬಹುದಾದ ವಿಷಯಗಳು, ಶಾಲಾಹಂತಗಳು, ವಿನ್ಯಾಸ, ಅದರ ಹಿಂದಿನ ತರ್ಕ, ಕಲಿಕೆಗೆ ಬೇಕಾದ ದೃಷ್ಟಿಕೋನ, ತಯಾರಿ, ತಜ್ಞತೆ, ಬೋಧನಾಕ್ರಮ, ಮೌಲ್ಯಮಾಪನ ವಿಧಾನ, ಶಿಶುಕೇಂದ್ರಿತ ಶಿಕ್ಷಣ ವ್ಯವಸ್ಥೆ, ಪೂರ್ವ ಪ್ರಾಥಮಿಕ ಶಿಕ್ಷಣ, ಭಾಷಾ ಕಲಿಕೆ, ಗಣಿತ, ವಿಜ್ಞಾನ, ಕಲೆ, ಸಮಾಜವಿಜ್ಞಾನ, ವೃತ್ತಿ ಕೌಶಲ್ಯ ತರಬೇತಿ ಶಿಕ್ಷಣ, ಜೀವನ ಮೌಲ್ಯಗಳು, ಸುತ್ತಲಿನ ಪರಿಸರ, ಮಾರ್ಗದರ್ಶನ, ಸಮಾಧಾನ, ಭಾರತೀಯತೆಗೆ ಒತ್ತು, ಒಳಗೊಳ್ಳುವಿಕೆ, ಶಾಲಾ ಸಂಸ್ಕೃತಿ, ಕಾರ್ಯ ವಿಧಾನ, ಶಿಕ್ಷಕ–ವಿದ್ಯಾರ್ಥಿ ಸಂಖ್ಯಾನುಪಾತ, ಶಿಕ್ಷಕರ ಸಬಲೀಕರಣ, ಕಲಿಕೆಗೆ ಸೂಕ್ತ ವಾತಾವರಣ ನಿರ್ಮಾಣದಂತಹ ಅತ್ಯಗತ್ಯ ವಿಚಾರಗಳ ಕಡೆ ಒತ್ತು ನೀಡುವ ಈ ಕರಡಿನಲ್ಲಿ ಧನಾತ್ಮಕ ಚಿಂತನೆಗಳ ಹೊಳೆಯೇ ಹರಿದಿದೆ.

### ಮೀರಿದ ಉಮೇದು, ಕುಂದಿದ ತಯಾರಿ

ಮುಂದಿನ ಶೈಕ್ಷಣಿಕ ಸಾಲಿನಿಂದಲೇ (2024–25) ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರಬೇಕೆನ್ನುವ ಉಮೇದು ಸರ್ಕಾರದ ಎಲ್ಲ ಕೆಲಸಗಳಲ್ಲಿ ಕಾಣಿಸುತ್ತಿದೆ. ಆದರೆ ಕ್ಷೇತ್ರ ಕಾರ್ಯ ಸಂಘಟಕರಿಗೆ ನಿದ್ರೆ ದೂರವಾಗಿ ತಲೆಬಿಸಿ ಏರಿದೆ. ಮೂಲಭೂತ ಸೌಕರ್ಯಗಳ ಕೊರತೆ, ನುರಿತ ಶಿಕ್ಷಕರ ಅನುಪಸ್ಥಿತಿ, ಎಷ್ಟೋ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲದಿರುವ ಸ್ಥಿತಿ, ಕೋವಿಡ್‌ನಿಂದಾದ ಉದ್ಯೋಗ–ಆದಾಯ ನಷ್ಟಗಳು, ಕಲಿಕಾ ನ್ಯೂನತೆಯಿಂದಾಗಿ ಚಿಕ್ಕ ವಿಷಯವನ್ನೂ ಕಲಿಯಲು ಒದ್ದಾಡುತ್ತಿರುವ ವಿದ್ಯಾರ್ಥಿ ಸಮುದಾಯ, ಬದಲಾದ ಸನ್ನಿವೇಶಗಳ ಫಲವಾಗಿ ಏರಿಕೆಯಾಗಿರುವ ಶಾಲಾ ನಿರ್ವಹಣಾ ಖರ್ಚು, ಮುಂತಾದ ಅಡ್ಡಿಗಳಿಂದ ಹೊಸ ಶಿಕ್ಷಣ ನೀತಿಯ ಅನುಷ್ಠಾನ ಅಷ್ಟು ಸುಲಭವಲ್ಲ ಎಂಬ ಸುಳುಹು ಸಿಗುತ್ತಿದೆ. ಅನುಷ್ಠಾನಕ್ಕೂ ಮುನ್ನ ದೇಶದಾದ್ಯಂತ ಶಿಕ್ಷಕರಿಗೆ ತರಬೇತಿ ನೀಡಬೇಕು, ನಂತರ ಅನುಷ್ಠಾನದ ಕೆಲಸ ಶುರುವಾಗಬೇಕು ಎನ್ನುವುದು ಶಿಕ್ಷಣ ತಜ್ಞರ ಅಭಿಮತ. ಹೊಸ ಶಿಕ್ಷಣನೀತಿ ಕನಿಷ್ಠ ಮುಂದಿನ ಐವತ್ತು ವರ್ಷಗಳ ಕಾಲ ವಿದ್ಯಾರ್ಥಿ ಹಾಗೂ ಶಿಕ್ಷಣ ಸಂಸ್ಥೆಗಳ ಹಿತ ಕಾಯಬೇಕು, ಅದು ದೇಶದ ಆರ್ಥಿಕತೆಯ ಬೆನ್ನೆಲುಬಾಗಬೇಕು ಎನ್ನುವುದು ತಜ್ಞರ ಅಭಿಪ್ರಾಯ.

### ಕ್ರಿಯಾಶೀಲ-ಅನ್ವೇಷಣಾತ್ಮಕ ಶಿಕ್ಷಣ ಬೇಕು

'ಥಿಂಕ್ ಔಟ್‌ಸೈಡ್ ದ ಬಾಕ್ಸ್' ಎನ್ನುವುದು ಈ ಕಾಲದ ಸಮಾಜ ವಿಜ್ಞಾನಿಗಳ ಮಾತು. ಹೊಸ ಚಿಂತನೆ ಮತ್ತು ಸಾಧನೆಗಳ ಬಗೆಗೆ ಆಸ್ಥೆಯುಳ್ಳ ಪ್ರತಿಯೊಬ್ಬ ತಜ್ಞನೂ ವಿದ್ಯಾರ್ಥಿಗಳಿಗೆ ಅದನ್ನೇ ಹೇಳುತ್ತಾನೆ. ಪ್ರಶ್ನೋತ್ತರಗಳ ಮಾದರಿಗಳ ಮೂಲಕ 'ಥಿಂಕ್ ಔಟ್ ಸೈಡ್ ದ ಬಾಕ್ಸ್' ಎಂದರೇನೆಂದು ವಿವರಿಸುತ್ತಾರೆ. ಉದಾಹರಣೆಗೆ, ತುಂಬಿದ ತರಗತಿಯಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ 'ಡ್ರಾ ದ ಪಿಕ್ಚರ್ ಆಫ್ ಎ ರಿಂಗ್' ಎಂದು ಕೇಳಿ ನೋಡಿ. ಬಹುತೇಕ ವಿದ್ಯಾರ್ಥಿಗಳು ಕಿವಿಗೆ ಹಾಕುವ ರಿಂಗ್, ಕೈಬಳೆ, ಟೆನ್ನಿಕಾಯಿಟ್ ರಿಂಗ್, ಕೈಯ ಉಂಗುರ, ದುಂಡನೆಯ ಗಡಿಯಾರ, ವೃತ್ತದ ಚಿತ್ರ ಬರೆಯುತ್ತಾರೆ. ಪ್ರತೀ ಚಿತ್ರವೂ ವೃತ್ತವನ್ನು ಹೋಲುತ್ತಿರುತ್ತದೆ. ಎಲ್ಲೋ ಅಪರೂಪಕ್ಕೆ ಒಬ್ಬ ವಿದ್ಯಾರ್ಥಿ ಬಾಕ್ಸಿಂಗ್ ಆಟದ 'ಚೌಕ' ಅಥವಾ ಸ್ಕೇಟಿಂಗ್ ಆಟದ ಚೌಕದ ಚಿತ್ರದ ಬರೆದಿರುತ್ತಾನೆ. 'ರಿಂಗ್' ಎಂದಾಕ್ಷಣ ವೃತ್ತಾಕಾರದಲ್ಲಿರಬೇಕೆಂಬುದು ರೂಢಿಗತ ತಿಳಿವಳಿಕೆ. ಚೌಕವನ್ನು 'ರಿಂಗ್' ಎಂದು ಪರಿಗಣಿಸುವಂತೆ ಚಿಂತಿಸಿ ಬರೆಯುವುದು 'ಥಿಂಕ್ ಔಟ್‌ಸೈಡ್ ದ ಬಾಕ್ಸ್' ಎನ್ನಿಸಿಕೊಳ್ಳುತ್ತದೆ. ಇಂದಿನ ವಿದ್ಯಾರ್ಥಿ–ಪದವೀಧರರಿಗೆ ಬೇಕಿರುವುದು ಇಂಥದೇ ಕ್ರಿಯಾಶೀಲತೆ. ಈ ಬಗೆಯ ವಿದ್ಯಾರ್ಜನೆ ನೀಡುವ ಯಾವುದೇ ಶಿಕ್ಷಣ ಕ್ರಮ ವಿದ್ಯಾರ್ಥಿಯ ಸರ್ವಾಂಗೀಣ ಏಳಿಗೆಯನ್ನು ಗುರಿಯಾಗಿರಿಸಿಕೊಂಡಿರುತ್ತದೆ ಎಂಬುದು ತಜ್ಞರ ನಂಬಿಕೆ.

### ಕ್ರಿಯಾಶೀಲತೆ - ಹೊಸತನದ ಬಂಧ

ಶಿಕ್ಷಣ ಕ್ರಮ ಕ್ರಿಯಾಶೀಲತೆಯ ಜೊತೆಗೆ ಆವಿಷ್ಕಾರ ಮನೋಭಾವ ಅಥವಾ ಅನ್ವೇಷಣೆಯ ಗುಣ ಬೆಳೆಸಿಕೊಂಡರೆ ಮಾತ್ರ ಶಿಕ್ಷಣದ ಮೂಲ ಉದ್ದೇಶ ಸಾರ್ಥಕಗೊಳ್ಳುತ್ತದೆ. ಈಗ ಜಾರಿಗೆ ಬರಲು ತಯಾರಾಗಿರುವ ನೂತನ ಶಿಕ್ಷಣ ನೀತಿಯು